

### 1 ರಿಂದ 2 ವರ್ಷ ಮಕ್ಕಳು

- ★ ತಮ್ಮ ತಟ್ಟೆಯನ್ನು ಗುರುತಿಸಿ ಚಪಾತಿ ಅಥವಾ ಇನ್ನಿತರ ಘನ ರೂಪದ ತಿಂಡಿಗಳನ್ನು ಬಡಿಸಿಕೊಳ್ಳುವುದು.
- ★ ಸ್ನಾನಕ್ಕೆ ತನ್ನ ಟವೆಲ್ ತಂದುಕೊಳ್ಳುವುದು, ಕೊಳಕು ಬಟ್ಟೆ ನಿರ್ದಿಷ್ಟ ಜಾಗದಲ್ಲಿ ಹಾಕುವುದು.
- ★ ಹೊರಕ್ಕೆ ಹೊರಡುವಾಗ ತನ್ನ ಶೂ ಗುರುತಿಸಿ ಜೋಡಿಸಿಕೊಳ್ಳುವುದು.
- ★ ಸಾಕ್ಸ್ ಬಿಚ್ಚಿಕೊಳ್ಳುವುದು
- ★ ಆಟದ ಸಾಮಾನು ಮರಳಿ ಬುಟ್ಟಿಗೆ ತುಂಬುವುದು

ಹಾಗೆಯೇ, ಕೆಲಸ ವಹಿಸಿಕೊಡುವಾಗ ಅದರ ಅಗತ್ಯ ಮತ್ತು ಪರಿಣಾಮಗಳ ಬಗ್ಗೆ ಹೇಳಿರಬೇಕು. ಅವರಿಂದ ಏನನ್ನು ನಿರೀಕ್ಷಿಸುತ್ತಿದ್ದೇವೆ ಎಂಬುದನ್ನು ಸರಳ ಮತ್ತು ಸ್ಪಷ್ಟವಾದ ಚಿಕ್ಕ ವಾಕ್ಯಗಳಲ್ಲಿ ತಿಳಿಸಿದರೆ, ಮಕ್ಕಳು ಅದನ್ನು ಸರಿಯಾಗಿ ಮಾಡುವ ಸಾಧ್ಯತೆಗಳು ಹೆಚ್ಚು. ಚಟುವಟಿಕೆಗಳ ಮೂಲಕ ಮಕ್ಕಳ ಕೌಶಲ್ಯದ ಬೆಳವಣಿಗೆಯ ಜೊತೆ ಮಕ್ಕಳ ಜವಾಬ್ದಾರಿ ಪ್ರಜ್ಞೆಯೂ ಬೆಳೆಯುತ್ತದೆ. ಜತೆಗೆ ಸಹಕಾರ, ಹೊಂದಾಣಿಕೆಯ ಮನೋಧರ್ಮವೂ ಬೆಳೆಯುತ್ತದೆ.

6 ವರ್ಷದೊಳಗಿನ ಮಕ್ಕಳು ಸ್ವಂತವಾಗಿ ಮಾಡಬಲ್ಲ ಕೆಲವು ಕೆಲಸಗಳ ಪಟ್ಟಿ ಇಲ್ಲಿದೆ ಗಮನಿಸಿ. (ಪ್ರತೀ ಮಗುವಿನ ಕೌಶಲ್ಯದ ಬೆಳವಣಿಗೆ ಬೇರೆ ಬೇರೆ ಇರುತ್ತದೆ. ಇಲ್ಲಿ ಸರಾಸರಿ ಸಾಮರ್ಥ್ಯದ ಮಗುವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.) •

### 2 ರಿಂದ 3 ವರ್ಷ ಮಕ್ಕಳು

- ★ ಊಟಕ್ಕೆ ಲೋಟಗಳನ್ನು ಇಡುವುದು.
- ★ ಊಟದ ಪ್ಲೇಟ್, ಪಾತ್ರೆ ತೊಳೆಯುವ ಜಾಗದಲ್ಲಿ ಹಾಕುವುದು.
- ★ ಚಪ್ಪಲಿ/ ಲೇಸ್ ರಹಿತ ಶೂ ಧರಿಸುವುದು.
- ★ ಗಿಡಕ್ಕೆ ನೀರು ಹಾಕುವುದು.

### 3 ರಿಂದ 4 ವರ್ಷ ಮಕ್ಕಳು

- ★ ಹೂವು ಕೊಯ್ಯುವುದು.
- ★ ತರಕಾರಿಗಳನ್ನು ಬೇರ್ಪಡಿಸುವುದು.
- ★ ಊಟದ ನಂತರ ಕೈ ಬಾಯಿ ತೊಳೆದುಕೊಳ್ಳುವುದು.
- ★ ತಿಂಡಿ ಡಬ್ಬಿ, ನೀರಿನ ಬಾಟಲಿ ಬ್ಯಾಗಿಗೆ ತುಂಬಿಕೊಳ್ಳುವುದು.
- ★ ಕಥೆ ಪುಸ್ತಕ, ಚಟುವಟಿಕೆಗಳ ಸಾಮಗ್ರಿ ತನ್ನ ಕಪಾಟಿನಲ್ಲಿ ಇಟ್ಟುಕೊಳ್ಳುವುದು.
- ★ ಸ್ವಂತವಾಗಿ ಚಡ್ಡಿ ಧರಿಸಿಕೊಳ್ಳುವುದು.
- ★ ಸಣ್ಣ ಪ್ರಮಾಣದಲ್ಲಿ ಚೆಲ್ಲಿದ ನೀರು ಒರೆಸುವುದು.

### 4 ರಿಂದ 5 ವರ್ಷ ಮಕ್ಕಳು

- ★ ಬೆಳಗ್ಗೆ ಬ್ರಷ್ ಮಾಡಿಕೊಳ್ಳುವುದು. (ರಾತ್ರಿ ಹಲ್ಲಿನ ರಕ್ಷಣೆ ದೃಷ್ಟಿಯಿಂದ ದೊಡ್ಡವರ ಮೇಲ್ವಿಚಾರಣೆ ಬೇಕು)
- ★ ಸೈಕಲ್, ಆಟದ ವಸ್ತುಗಳ ಸ್ವಚ್ಛತೆ ನೋಡಿಕೊಳ್ಳುವುದು.
- ★ ಕಿರಿಯ ಸಹೋದರ/ಸಹೋದರಿಯರ ಪಾಲನೆಯಲ್ಲಿ ಸಣ್ಣ ಪುಟ್ಟ ಸಹಾಯ ಮಾಡುವುದು.
- ★ ಹಾಲ್ ನ ಸೋಫಾ, ಟೇಬಲ್ ಒರಣವಾಗಿರಿಸುವುದು.
- ★ ಕರ್ಚೀಫ್ ಮಡಚಿ ಇಟ್ಟುಕೊಳ್ಳುವುದು.
- ★ ಪೇಪರ್ ಚೂರುಗಳಂತಹ ದೊಡ್ಡ ಕಸ ತೆಗೆಯುವುದು.

### 5 ರಿಂದ 6 ವರ್ಷ ಮಕ್ಕಳು

- ★ ಆಟದ ನಂತರ ಸೋಪ್ ಉಪಯೋಗಿಸಿ ಕೈಕಾಲು ತೊಳೆದುಕೊಳ್ಳುವುದು.
- ★ ಊಟಕ್ಕೆ ತಟ್ಟೆ, ಲೋಟ, ಉಪ್ಪಿನ ಡಬ್ಬಿ ಜೋಡಿಸುವುದು.
- ★ ಚಪಾತಿ ಉಂಡೆಗಳನ್ನು ಮಾಡಿ ಕೊಡುವುದು.
- ★ ಚಿಕ್ಕ ಚಿಕ್ಕ ಬಟ್ಟೆಗಳನ್ನು ಮಡಚುವುದು.
- ★ ನೀರಿನ ಲೋಟಗಳನ್ನು ತೊಳೆದಿಡುವುದು.
- ★ ನೀರಿನ ಬಾಟಲಿ ತುಂಬಿಕೊಳ್ಳುವುದು, ಸ್ಕೂಲ್ ಬ್ಯಾಗ್ ಜೋಡಿಸಿಕೊಳ್ಳುವುದು.

ಪುಟ್ಟ ಮಕ್ಕಳ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ಇಂತಹ ಕೆಲಸಗಳನ್ನು ಸ್ವತಃ ಮಾಡಿಕೊಳ್ಳಲು ಬಾಲ್ಯದಲ್ಲೇ ಅವಕಾಶ/ಮಾರ್ಗದರ್ಶನ ನೀಡಿ. ಸ್ವಾವಲಂಬನೆಯ ಹೆದ್ದಾರಿಯತ್ತ ಮುಂದೆ ಅವರೇ ಸಾಗುತ್ತಾರೆ.